**ಸಾಕ್ಷಿಯನ್ನು ದಿಃ 23-09-2021 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲುಃ ಶ್ರೀ ಜಿ ಬಿ ಎನ್ ವಕೀಲರಿಂದ**

ವಾದಿ ಸಂಸ್ಥೆ ನೊಂದಣಿಯಾಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಸದರಿ ಸಂಸ್ಥೆಗಳಿಗೆ ಟ್ರಸ್ಟಿಗಳು ಇರುತ್ತಾರೆ ಎಂದರೆ ಸರಿ. ಎಲ್ಲಾ ಟ್ರಸ್ಟಿಗಳು ತೀರಿಕೊಂಡಿದ್ದು ನಾನು ಸಹ ಟ್ರಸ್ಟಿ ಮಾನ್ಯನೇಜರ ಆಗಿರುತ್ತೇನೆ. ನನ್ನನ್ನು ಚಾರಿಟಿ ಕಮೀಷನರವರು ಟ್ರಸ್ಟಿಯಾಗಿ 1989 ರಲ್ಲಿ ನೇಮಕ ಮಾಡಿದ್ದಾರೆ. ಈ ಸಂಬಂಧ ಪಿಟಿಆರ್ ದಾಖಲೆ ನಿಪಿ-16 ನ್ನು ಹಾಜರುಪಡಿಸಿದ್ದೇನೆ.

ಟ್ರಸ್ಟಿಗಳು ತೀರಿಕೊಂಡಿದ್ದ ಕಾರಣ ಹೊಸ ಟ್ರಸ್ಟಿಯನ್ನು ನೇಮಕ ಮಾಡಿಕೊಡಿಬೇಕೆಂದು ಚಾರಿಟಿ ಕಮೀಷನರ ಬೆಳಗಾವಿರವರಿಗೆ ಅರ್ಜಿ ನೀಡಿದ್ದೇನೆ ಎಂದರೆ ಸರಿ. ಸದರಿ ಚಾರಿಟಿ ಕಮೀಷನರವರು ಜಿಲ್ಲಾ ನ್ಯಾಯಾಲಯಕ್ಕೆ ಹೋಗಿ ನೇಮಕ ಮಾಡಿಕೊಂಡು ಬರುವಂತೆ ಆದೇಶಿಸಿದ್ದರು ಎಂದರೆ ಸರಿ. ಅದರಂತೆ ನಾನು ಓ ಎಸ್ ನಂ. 3/1994 ನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಟ್ರಸ್ಟಿಗಳ ನೇಮಕಕ್ಕೆ ಸಂಬಂಧಿಸಿದಂತೆ Bombay Public Trust Act ರೀಪಿಲ ಆಗಿರುವ ಕಾರಣ ಕಲಂ 92 ಸಿಪಿಸಿ ಪ್ರಕಾರ ಆದೇಶ ಪಡೆಯವಂತೆ ಆದೇಶಿಸಿದ್ದರು ಎಂದರೆ ಸರಿ. ಓ ಎಸ್ ನಂ. 3/1994 ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಚಾಲ್ತಿಯಲ್ಲಿ ಇದೆ ಅದರ ನಂಬರ ನೆನಪಿಲ್ಲ. ಸದರಿ ಓ ಎಸ್ ನಂ. 3/1994 ರ ವಿರುದ್ದ ಯಾವುದೇ ಆರ್ ಎಸ್ ಎ ಯಾವುದೇ ಮೇಲ್ಮನವಿ ಚಾಲ್ತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿ ಆರ್ ಎಸ್ ಎ ಚಾಲ್ತಿಯಲ್ಲಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪರಿಸಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ.

ನಾನು ವಾದಿ ಸಂಸ್ಥೆಗೆ ಟ್ರಸ್ಟಿಯ ಅಲ್ಲ ಮ್ಯಾನೇಜರ ಅಲ್ಲ ಎಂದರೆ ಸರಿಯಲ್ಲ. ನಿಪಿ-16 ಕೇವಲ ನಾವು ನೀಡಿರುವ ಪ್ರಸ್ತಾಪ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ದುರುಪಯೋಗ ಪಡಿಸಿಕೊಂಡು ನಾನು ಟ್ರಸ್ಟಿ ಮಾನ್ಯನೇಜರ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಈ ದಾವಾ ಸಲ್ಲಿಸಲು ನನಗೆ ಪ್ರತ್ಯೇಕವಾಗಿ ವಾದಿ ಸಂಸ್ಥೆಯಿಂದ ನನಗೆ ಅಧಿಕಾರ ಪತ್ರ ನೀಡಿಲ್ಲ ಕಾರಣ ದಾವೆ ಸಲ್ಲಿಸುವ ಕಾಲಕ್ಕೆ ಯಾವುದೇ ಟ್ರಸ್ಟಿಗಳು ಜೀವಂತ ಇರಲಿಲ್ಲ. ಈ ದಾವೆ ಸಲ್ಲಿಸುವ ಕಾಲಕ್ಕೆ ನಿಪಿ-16 ರಲ್ಲಿ ಜಿ ಟಿ ಬನ್ನಾ ಎಂಬುವವರು ಟ್ರಸ್ಟಿಯ ಹೆಸರು ಇತ್ತು ಎಂದರೆ ಸರಿ. ಈ ದಾವೆ ಸಲ್ಲಿಸಿದ ನಂತರ ಸದರಿ ಜಿ ಟಿ ಬನ್ನಾರವರು ಜೀವಂತ ಇದ್ದರು ನನಗೆ ನಿಖರವಾಗಿ ಗೊತ್ತಿಲ್ಲ. ಗದಗಿನಲ್ಲಿರುವ ವಾದಿ ಸಂಸ್ಥೆಗೆ ಸೇರಿದ ಎಲ್ಲಾ ಆಸ್ತಿಗಳನ್ನು ಜಿ ಟಿ ಬನ್ನಾರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ವಾದಿ ಸಂಸ್ಥೆಗೆ ಸೇರಿದ ಸ್ವತ್ತುಗಳ ವಿವರದ ದಾಖಲೆ ನನ್ನ ಬಳಿ ಇದೆ. ಸದರಿ ದಾಖಲೆಯಲ್ಲಿ ಯಾರು ಯಾರು ವಾದಿ ಸಂಸ್ಥೆಯ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದು ಮಾಹಿತಿ ಇದೆ ಎಂದರೆ ಸಾಕ್ಷಿಯು ಎಲ್ಲಾ ಸ್ವತ್ತುಗಳಲ್ಲಿ ಸ್ವಾಧೀನ ಇರುವ ಬಗ್ಗೆ ಮಾಹಿತಿ ಇರುವುದಿಲ್ಲ ಆದರೆ ಕೆಲವು ಸ್ವತ್ತುಗಳು ಅತಿಕ್ರಮವಾಗಿರುತ್ತವೆ ಎನ್ನುತ್ತಾರೆ.

ವಾದಿ ಸಂಸ್ಥೆಯ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆಗಳನ್ನು ನಿರ್ವಹಿಸಿದ್ದೇನೆ. ಸುಮಾರು 1990 ರಿಂದ ಸದರಿ ಸಂಸ್ಥೆಗೆ ಸೇರಿದ ದಾಖಲೆಗಳನ್ನು ನಿರ್ವಹಣೆ ಮಾಡಿದ್ದೇನೆ. ಸದರಿ ದಾಖಲೆಗಳ ನಿರ್ವಹಣೆಯ ಬಗ್ಗೆ ಜಿ ಟಿ ಬನ್ನಾರವರಿಗೆ ಗೊತ್ತಿಲ್ಲ.

ದಾವಾ ಸ್ವತ್ತು ಮೂಲತಃ ಯಾರಿಂದ ಯಾರಿಗೆ ಬಂದಿದೆ ಎಂಬ ಬಗ್ಗೆ ಮೂಲ ದಾಖಲೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 1990 ರಿಂದ ಕೆಲವು ದಾಖಲೆಗಳು ನನ್ನ ಬಳಿ ಇದೆ ಕೆಲವು ದಾಖಲೆಗಳನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಉಚ್ಚ ನ್ಯಾಯಾಲಯಕ್ಕೆ ಕೆಲವು ದಾಖಲೆಗಳ ವಿವರ ನನ್ನ ಬಳಿ ಇದೆ ಆದರೆ ಕೆಲವು ದಾಖಲೆಗಳ ವಿವರ ನನ್ನ ಬಳಿ ಇಲ್ಲ.

ದಾವಾ ಸ್ವತ್ತಿಗೆ ಸಂಬಂದಿಸಿದ ದಾಖಲೆಗಳ ಕಡತ ನನ್ನ ಬಳಿ ಇದೆ. ಅದನ್ನು ಹಾಜರುಪಡಿಸಲಎ ತೊಂದರೆ ಇಲ್ಲ. ನಾನು ಟ್ರಸ್ಟಿಯಲ್ಲದ ಕಾರಣ ಯಾವುದೇ ದಾಖಲೆ ಇಲ್ಲದಿದ್ದರು ಸಹ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಸಂಸ್ಥೆಯವರು ಈ ದಾವೆ ಸಲ್ಲಿಸಲು ನನಗೆ ಯಾವುದೇ ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ.

ನಿಪಿ-2 ರ ಸ್ವತ್ತಿನಲ್ಲಿ ಎಷ್ಟು ಆಸ್ತಿಗಳು ಇವೆ ಎಂದರೆ ಸಾಕ್ಷಿಯು ಅದು ಒಂದೇ ಆಸ್ತಿ ಎಂದು ನುಡಿಯತ್ತಾರೆ.

ಬಾಶಲ್ ಮಿಷನ್ ಸಂಸ್ಥೆಯ ಸ್ವತ್ತುಗಳಲ್ಲಿ ಸ್ವಾಧೀನ ಇರುವವರು ಸದರಿ ಮನೆಗಳನ್ನು ರೀಪೇರಿ ಮಾಡಬೇಕಾದರೆ ಬಾಶಲ್ ಮಿಷನ ಸಂಸ್ಥೆಯ ಅನುಮತಿ ಪಡೆದು ರೀಪೇರಿ ಮಾಡಬೇಕು ಎಂದರೆ ಸರಿ. ದಿಃ 15-11-2015 ರಂದು 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ರೀಪೇರಿ ಮಾಡಲು ಅನುಮತಿ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ವಿರುದ್ಧ ದಾವೆ ಸಲ್ಲಿಸಲು ಯಾವುದೇ ಅಧಿಕಾರ ಇಲ್ಲದಿದ್ದರು ಸಹ ದಿಃ 15-09-2018 ರಂದು ಸುಳ್ಳು ನೋಟಿಸನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮನೆ ಕಟ್ಟಬೇಕಾದರೆ ಮತ್ತು ರೀಪೇರಿ ಮಾಡಿಕೊಳ್ಳಬೇಕಾದರೆ ನಗರ ಸಭೆಯ ಅನಮತಿ ಬೇಕು ಎಂದರೆ ಸರಿ. ಪ್ರತಿವಾದಿ 1 ರವರ ಹೆಂಡತಿ ಮಕ್ಕಳು ನಗರ ಸಭೆಯಿಂದ ಅನುಮತಿ ಪಡೆದು ಹೊಸ ಆರ್.ಸಿ.ಸಿ ಮನೆ ಕಟ್ಟಿದ್ದಾರೆ ಎಂದರೆ ಸಾಕ್ಷಿಯು ಅನುಮತಿ ಪಡೆದಿಲ್ಲಾ ಎಂದು ನುಡಿಯತ್ತಾರೆ. ಪ್ರತಿವಾದಿಗಳು 2 ಅಂತಸ್ತಿನ ಮನೆ ಕಟ್ಟಿಕೊಂಡು ಸುಮಾರು 8-10 ವರ್ಷಗಳಿಂದ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

ನಾನು ವಾಸ ಮಾಡುತ್ತಿರುವ ಮನೆ ಮತ್ತು ಪ್ರತಿವಾದಿಗಳು ವಾಸಿಸುತ್ತಿರುವ ದಾವಾ ಸ್ವತ್ತು ಒಂದಕ್ಕೊಂದು ಅಂಟಿಕೊಂಡಿದೆ ಎಂದರೆ ಸರಿ. ಪ್ರತಿವಾದಿಗಳು 2015 ರಲ್ಲಿ ಹಳೆ ಮನೆಯನ್ನೇ ರೀಪೇರಿ ಮಾಡಿಕೊಂಡು ಮೇಲೆ ಒಂದು ಅಂತಸ್ತು ಕಟ್ಟಿಕೊಂಡಿದ್ದಾರೆ. ಪ್ರತಿವಾದಿ 8-10 ವರ್ಷಗಳ ಹಿಂದೆ ದಾವಾ ಸ್ವತ್ತಿನಲ್ಲಿ  ಹೊಸ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮಂದುವರೆದು ಮೇಲಿನ ಅಂತಸ್ತು ಮಾತ್ರ ಹೊಸ ಮನೆಯಾಗಿತ್ತು ನೆಲ ಅಂತಸ್ತು ಹಳೆಮನೆಯಾಗಿದೆ ಎಂದು ನುಡಿಯತ್ತಾರೆ.

ಬಾಶಲ್ ಮೀಶನ್ ಸಂಸ್ಥೆಯವರು ಫಲಾನುಭವಿಗಳಿಗೆ ಭೂ ಬಾಡಿಗೆ ಮತ್ತು ಮನೆ ಬಾಡಿಗೆಗೆ ನೀಡಿರುತ್ತಾರೆ. ಸದರಿ ಸಂಸ್ಥೆಯನ್ನು ಎಪಷ್ಟು ಮನೆಯನ್ನು ಬಾಡಿಗೆಗೆ ನೀಡಿದೆ ಮತುತ ಎಷ್ಟು ಬಾಡಿಗೆ ಬರುತ್ತದೆ ಎಂದು ದಾಖಲೆಗಳ ಕಡತವನ್ನು ನಿರ್ವಹಿಸಿದ್ದೇನೆ. ಸದರಿ

ಸಂಸ್ಥೆಯ ಬ್ಯಾಂಕ ಖಾತೆ ಇಲ್ಲ. ಸದರಿ ಸ್ವತ್ತುಗಳಿಂದ ಬಂದ ಬಾಡಿಗೆ ಹಣವನ್ನು ಸದರಿ ಮನೆಗಳ ನಿರ್ವಹಣೆಗೆ ಖರ್ಚು ಮಾಡುತ್ತೇನೆ. ಸದರಿ ಸಂಸ್ಥೆಗೆ ಬಂದ ಹಣಕಾಸಿನ ವ್ಯವಹಾರಗಳನ್ನು ಲೆಕ್ಕಪರೀಶೋಧನೆಗೆ ಒಳಪಡಿಸಿದ್ದಿರಾ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ದಾವೆಗಳು ಇರುವುದರಿಂದ ಲೆಕ್ಕಪರಿಶೋಧನೆಗೆ ಒಳಪಡಿಸಿಲ್ಲ ಎನ್ನುತ್ತಾರೆ. ಬಾಶಲ್ ಮಿಷನ ಸಂಸ್ಥೆಯ ಹಣವನ್ನು ಯಾವುದೇ ಒಬ್ಬ ವ್ಯಕ್ತಿ ಇಟ್ಟುಕೊಳ್ಳುವುದಿಲ್ಲ ಎಂದರೆ ಸರಿ. ಇತ್ತಿಚೇಗೆ ಯಾವುದೇ ಬಾಡಿಗೆಯನ್ನು ವಸೂಲು ಮಾಡಿಲ್ಲ. ಬಾಶಲ್ ಮಿಷನ ಸಂಸ್ಥೆಗೆ ಸೇರಿದ ಸುಮಾರು 500 ಮನೆಗಳು ಇವೆ ಎಂದರೆ ಸಾಕ್ಷಿಯು 250 ಮನೆಗಳು ಇವೆ ಎಂದು ನುಡಿಯತ್ತಾರೆ. ಸದರಿ ಮನೆಗಳಿಂದ ಯಾವುದೇ ಬಾಡಿಗೆ ಬರುವುದಿಲ್ಲ. ಸದರಿ 250 ಮನೆಗಳ ಪೈಕಿ ಎಷ್ಟು ಮನೆಗಳನ್ನು ಬಾಡಿಗೆಗೆ ನೀಡಲಾಗಿದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಪ್ರಸ್ತುತ ಸುಮಾರು 25 ಮನೆಯ ಬಾಡಿಗೆಗಳು ಮಾತ್ರ ಸುಮಾರು 5-6 ವರ್ಷಕ್ಕೊಮ್ಮೆ ಬರುತ್ತದೆ.

ದಾವಾ ಸ್ವತ್ತಿನಲ್ಲಿ ಮೊದಲು ಪ್ರತಿವಾದಿಗಳು ಇರಲಿಲ್ಲ ಎಂದರೆ ಸರಿ. ಮೊದಲು ದಾವಾ ಸ್ವತ್ತಿನಲ್ಲಿ ನೀಲಾ ಬೊವೇರ ರವರು ಉರ್ಫ ಜಂತ್ಲಿರವರು ಮನೆಯ ಬಾಡಿಗೆಗೆ ಇದ್ದರು. ಸದರಿಯವರು ಬಾಡಿಗೆ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಸದರಿ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಸದರಿ ನೀಲಾ ಬೊವೇರ ರವರು ಉರ್ಫ ಜಂತ್ಲಿ ರವರು (6 ನೇ ಪ್ರತಿವಾದಿ) 3,50,000/- ಹಣ ಪಡೆದು ಪ್ರತಿವಾದಿ 1 ರಿಂದ 5 ರವರಿಗೆ ಸ್ವಾಧೀನ ನೀಡಿದ್ದಾರೆ ಎಂದರೆ ಸರಿಯಲ್ಲ.

ದಿಃ 09-10-2015 ರಿಂದ ಸ್ವಾಧೀನ ಪಡೆದ ದಿನದಿಂದ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಅನುಮತಿಯ ಮೇರೆಗೆ 2015 ರಿಂದ ಸ್ವಾಧೀನ ಪಡೆದು ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ವಾದಿ 1 ನೇ ಸಂಸ್ಥೆಯಿಂದ ಅನುಮತಿ ಪಡೆದು ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಬಾಡಿಗೆ ನೀಡಲು ವಿಫಲರಾಗಿದ್ದಾರೆ ಎಂದು ಸುಳ್ಳು ನೋಟಿಸನ್ನು ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅತೀಕ್ರಮಣ ಮಾಡಿ ಕಟ್ಟಡ ಕಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಸ್ವಾಧೀನಲ್ಲಿದ್ದ

ವಿಸ್ತೀರ್ಣದಲ್ಲಿ ಮಾತ್ರ ಪ್ರತಿವಾದಿ 1 ರಿಂದ 5 ರವರು ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿಯು ಹೆಚ್ಚಿನ ವಿಸ್ತೀರ್ಣದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು 3 ಅಡಿ ಅತೀಕ್ರಮಣ ಮಾಡಿ ಕಾಂಪೌಂಡ ಕಟ್ಟಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರಿನ ಶೆಡ್ಡನ್ನು ನಿರ್ಮಾಣ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಶೇಡ್ಡ ಮೊದಲೇ 6 ನೇ ಪ್ರತಿವಾದಿ ಇದ್ದಾಗಲೇ ಇತ್ತು ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಹಣ ಖರ್ಚು ಮಾಡಿರುವ ಬಗ್ಗೆ ದಾಖಲೆ ಇಲ್ಲ. ಪ್ರತಿವಾದಿಗಳು ನನಗೆ ಬಾಡಿಗೆ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹಾಗೂ ಪ್ರತಿವಾದಿಗಳಿಗೂ ನನಗೂ ಯಾವುದೇ ಸಂಬಂದಿಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೂ ನನಗೂ ಯಾವುದೇ ಮಾಲೀಕರು ಮತ್ತು ಬಾಡಿಗೆದಾರರ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನಗೆ ದಾವೆ ಸಲ್ಲಿಸಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಜೆ.ಎಮ್.ಎಫ್.ಸಿ ಗದಗ**